# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1172/2016/ಡಿಆರ್ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 9/11/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಐ.ಬಸವರಾಜ್, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಜೋಗಿನ ನಾಗರಾಜ್ ಬಿನ್ ಜ್ಯೋಗಿನ ರಾಮಪ್ಪ, 11ನೇ ವಾರ್ಡ್, ಸಂಡೂರುಗೇರಿ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಐ.ಬಸವರಾಜ್, ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ದಾವಣಗೆರೆ ಜಿಲ್ಲೆ, ಹರಪನಹಳ್ಳಿ ಪಟ್ಟಣದಲ್ಲಿರುವ ಪುರಸಭೆಗೆ ಸೇರಿದ ಮತ್ತು ಸರ್ಕಾರದ ಸ್ವತ್ತುಗಳಲ್ಲಿ ಖಾಸಗಿಯವರಿಗೆ ಅತಿಕ್ರಮಣ ಮಾಡಲು ಅವಕಾಶ ನೀಡಿ, ಡೋರ್ ನಂಬರ್‌ಗಳನ್ನು ನೀಡಿ ಸರ್ಕಾರಕ್ಕೆ ಸಂಬಂಧಪಟ್ಟ ಆಸ್ತಿಯನ್ನು ಕಾಪಾಡದೆ ಅಧಿಕಾರ ದುರುಪಯೋಗ ಪಡಿಸಿಕೊಂಡು ಕರ್ತವ್ಯ ಲೋಪ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಆರೋಪಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ ಸ.ನಂ.557, 556/ಬಿ4 ಮತ್ತು 556/ಬಿ2 ಗೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡಲಾಗಿ ಸದರಿ ಸರ್ವೆ ನಂಬರ್‌ಗಳಲ್ಲಿ ಬರುವಂತಹ ಜಮೀನುಗಳು ಮಾನ್ಯ ತಹಶೀಲ್ದಾರ್, ಹರಪನಹಳ್ಳಿರವರ ಕಾರ್ಯವ್ಯಾಪ್ತಿಗೆ ಬರುತ್ತಿದ್ದು, ಪುರಸಭಾ ಕಚೇರಿಯ ವ್ಯಾಪ್ತಿಗೆ ಬರುವುದಿಲ್ಲ ಹಾಗೂ ಸದರಿ ಜಮೀನುಗಳಲ್ಲಿ ಅವರ ಕಾರ್ಯಅವಧಿಯಲ್ಲಿ ಅಕ್ರಮವಾಗಿ ಡೋರ್ ನಂಬರ್‌ಗಳನ್ನು ನೀಡಿರುವುದಿಲ್ಲ ಹಾಗೂ ಯಾವುದೇ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿಕೊಳ್ಳಲು ಅನುಮತಿಯನ್ನು ನೀಡಿರುವುದಿಲ್ಲ. ಶ್ರೀ.ಗೋಕರ್ಣಾಥೇಶ್ವರ ದೇವಸ್ಥಾನದಲ್ಲಿನ ಮಳಿಗೆಗಳ ನಿವೇಶನ ಮುಜರಾಯಿ ಇಲಾಖೆಗೆ ಸೇರಿದ್ದಾರಿಗುರತ್ತದೆ. ದೂರಿನಲ್ಲಿ ಹೇಳಿರುವ ಅಂಶವು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಮುಖ್ಯಾಧಿಕಾರಿಗಳು ಉಡಾಫೆಯಿಂದ ಬೇಕಾಬಿಟ್ಟಿಯಾಗಿ ಸದರಿ ಸರ್ವೆ ನಂಬರ್‌ನಲ್ಲಿ ಯಾವುದೇ ಡೋರ್ ನಂಬರ್‌ಗಳನ್ನು ನೀಡಿರುವುದಿಲ್ಲವೆಂದು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಖುದ್ದಾಗಿ ಪರಿಶೀಲನೆ ನಡೆಸಿ ಪುರಸಭೆಯ ದಾಖಲೆಗಳನ್ನು ಪರಿಶೀಲಿಸಿದರೆ, ಸ್ಪಷ್ಟವಾಗಿ ಬಿಲ್ಡಿಂಗ್ ಲೈಸೆನ್ಸ್, ಪ್ಲಾನ್ ಮತ್ತು ಎಸ್ಟಿಮೇಟ್ ಎದುರುದಾರರ ಅವಧಿಯಲ್ಲಿ ಮಂಜೂರಾಗಿರುವುದು ಕಂಡುಬರುತ್ತದೆ. ಶ್ರೀ ಗೋಕರ್ಣಾಥೇಶ್ವರ ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿರುವ ವಾಣಿಜ್ಯ ಸಂಕೀರ್ಣವನ್ನು ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ಕಟ್ಟಲಾಗಿದ್ದು, ಸದರಿ ಪ್ರದೇಶವನ್ನು ನಿರ್ವಹಣೆ ಮಾಡುವ ಪ್ರಾಧಿಕಾರ ಪುರಸಭೆಯದ್ದಾಗಿರುತ್ತದೆ. ಆದ್ದರಿಂದ, ಪುರಸಭೆಯ ದಾಖಲಾತಿಗಳನ್ನು ಮತ್ತು ಕಟ್ಟಡಗಳ ಸ್ಥಳ ಪರಿಶೀಲನೆಯನ್ನು ನಡೆಸಿದರೆ ಇವರ ಭ್ರಷ್ಟಾಚಾರ ಬಯಲಿಗೆ ಬರುತ್ತದೆಯೆಂದು ಹೇಳಿರುತ್ತಾರೆ.

5) ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆಪಾದನೆಯಲ್ಲಿರುವ ಸ್ವತ್ತುಗಳು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಕಟ್ಟಡಗಳನ್ನು ಕಟ್ಟಲು ಮುಖ್ಯಾಧಿಕಾರಿಯವರೇ ಪರವಾನಗಿ ಮತ್ತು ಅನುಮೋದಿತ ನಕ್ಷೆಯನ್ನು ನೀಡಿರುತ್ತಾರೆಂದು ದೂರುದಾರರು ಹೇಳಿರುವ ಕಾರಣ ಸದರಿ ಆಪಾದನೆಗಳ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸುವುದು ಅವಶ್ಯಕವೆಂದು ಕಂಡುಬರುತ್ತದೆ. ಆದ್ದರಿಂದ, ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

6) ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ದಾವಣಗೆರೆ ಇವರು ಪೊಲೀಸ್ ನಿರೀಕ್ಷಕರ ಮೂಲಕ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಪೊಲೀಸ್ ನಿರೀಕ್ಷಕರ ವರದಿಯನ್ನು ಪರಿಶೀಲಿಸಿದಾಗ, ಈ ಕೆಳಕಂಡಂತೆ ಅಭಿಪ್ರಾಯ ನೀಡಿರುವುದು ಕಂಡುಬರುತ್ತದೆ.

   i. ಹರಪನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸ.ನಂ.557 ರಲ್ಲಿ 2.87 ಸೆಂಟ್ಸ್ ಸರ್ಕಾರದ ಹೆಸರಲ್ಲಿ ಜಾಗವಿದ್ದು, ಇದು ಹರಿಹರ ಹೊಸಪೇಟೆ ರಸ್ತೆಯಾಗಿದ್ದು, ಈ ಸಾರ್ವಜನಿಕ ರಸ್ತೆಯ ಬಳಿ ಇರುವ ಒಟ್ಟು 40 ಮನೆಗಳ ಪೈಕಿ 27 ಮನೆಗಳಿಗೆ ಡೋರ್ ನಂಬರ್‌ಗಳನ್ನು ನೀಡಿದ ಬಗ್ಗೆ ಪುರಸಭೆಯ ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ನಮೂದು ಇದ್ದು ಉಳಿದ 13 ಮನೆಗಳಿಗೆ ಯಾವುದೇ ಡೋರ್ ನಂಬರ್ ನೀಡಿರುವುದಿಲ್ಲ. ಇವುಗಳನ್ನು ಯಾವಾ, ಯಾರು ನೀಡಿದ್ದಾರೆಂಬ ಬಗ್ಗೆ ಮಾಹಿತಿಯನ್ನು ನೀಡಲು ಪುರಸಭೆ ಅಧಿಕಾರಿಗಳು ವಿಫಲರಾಗಿರುತ್ತಾರೆ.

   ii. ಹರಪನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸ.ನಂ.556/ಬಿ4 ಮತ್ತು 556/ಬಿ2 ಪ್ರೆಸಿಡೆಂಟ್ ಪಂಚಾಯಿತಿ ಬೋರ್ಡ್ ಜಾಗದಲ್ಲಿ ಸಾರ್ವಜನಿಕ ರಸ್ತೆ ಇರುವುದು ಕಂಡುಬಂದಿರುತ್ತದೆ.

   iii. ಸ.ನಂ.555 ರ ಪಹಣಿಯು ಶ್ರೀ.ಗೋಕರ್ಣೇಶ್ವರ ಸ್ವಾಮಿ ಹಾಗೂ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹರಪನಹಳ್ಳಿ ಎಂಬ ಹೆಸರಿನಲ್ಲಿರುತ್ತದೆ. 1997 ರಲ್ಲಿ ಪೋಡ್ ಮಾಡಿಕೊಂಡಿದ್ದು, ನಂತರದಲ್ಲಿ ಪಹಣಿ ಬದಲಾವಣೆ ಮಾಡಿಕೊಂಡಿರುವುದಿಲ್ಲ. ಈ ಜಾಗದಲ್ಲಿ 555/1 ರಲ್ಲಿ ಪುರಸಭೆಯಿಂದ ಅರ್ಧಂಬರ್ಧ ಕಟ್ಟಡ ಕಟ್ಟಿ ಬಿಟ್ಟಿದ್ದು ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿರುವುದು ಕಂಡುಬಂದಿರುತ್ತದೆ. ಈ ಜಾಗದ ಬಗ್ಗೆ ಮಾಹಿತಿಯು

ಪುರಸಭೆಯ ಅಧಿಕಾರಿಗಳಿಗೆ ಗೊತ್ತಿರದೇ ಇದ್ದು ದಾಖಲಾತಿಗಳನ್ನು ತೋರಿಸಿ ಮನವರಿಕೆ ಮಾಡುವಂತಾಗಿರುತ್ತದೆಯೆಂದು ಹೇಳಿರುತ್ತಾರೆ.

7) ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರಿಗೆ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

8) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಡೋರ್ ನಂಬರ್ ನೀಡಲಾಗಿರುವ ಬಗ್ಗೆ ಹಾಗೂ ಡೋರ್ ನಂಬರ್ ನೀಡದೇ ಇರುವ ಮನೆಗಳ ಬಗ್ಗೆ ಮಾಹಿತಿಯನ್ನು ನೀಡಲು ಪುರಸಭೆ ಅಧಿಕಾರಿಗಳು ವಿಫಲರಾಗಿರುತ್ತಾರೆ ಮತ್ತು ಪಂಚಾಯತ್ ಬೋರ್ಡ್ ಜಾಗದಲ್ಲಿ ಸಾರ್ವಜನಿಕ ರಸ್ತೆಗೆ ಅವಕಾಶ ಮಾಡಿಕೊಡಲಾಗಿದೆ ಮತ್ತು ಕಟ್ಟಡವನ್ನು ಅರ್ಧಂಬರ್ಧ ಕಟ್ಟಿ ಬಿಟ್ಟಿದ್ದು ಸರ್ಕಾರಕ್ಕೆ ನಷ್ಟವುಂಟುಮಾಡಿರುತ್ತಾರೆಂದು ಹೇಳಿರುವುದು ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪುರಸಭೆಗೆ ಸಂಬಂಧಪಟ್ಟ ಸ್ವತ್ತನ್ನು ರಕ್ಷಿಸುವ ಸಲುವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**